**ಕರ್ನಾಟಕ ಸರ್ಕಾರ**

ಸಂಖ್ಯೆ : ಸಿಆಸುಇ 9 ಎಸ್‌ಎಲ್‌ಸಿ 90
"ತುರ್ತು"

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ 29-11-90

**ಅನಧಿಕೃತ ಟಿಪ್ಪಣಿ**

ವಿಷಯ : ಡಾ: ಸರೋಜಿನಿ ಮಹಿಷಿ ಸಮಿತಿ ಮತ್ತು ಕನ್ನಡಿಗರ ಉದ್ಯೋಗ ಸಮಿತಿ ಸಲ್ಲಿಸಿರುವ ಶಿಫಾರಸುಗಳನ್ನು ಅಂಗೀಕರಿಸುವ ಬಗ್ಗೆ.

ಉಲ್ಲೇಖ : ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 9 ಎಸ್‌ಎಲ್‌ಸಿ 90 ದಿನಾಂಕ 23-11-1990.

* * *

ಡಾ: ಸರೋಜಿನಿ ಮಹಿಷಿ ಸಮಿತಿ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಅಂಗೀಕರಿಸಿ ಮತ್ತು ಅನುಮೋದಿಸಿ ಹೊರಡಿಸಿದ ಉಲ್ಲೇಖಿತ ಆದೇಶದ ಪ್ರತಿಯನ್ನು ಲಗತ್ತಿಸಿದೆ.

ಸದರಿ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸುಗಳ ಬಗ್ಗೆ ಯಾವ ಇಲಾಖೆಗಳು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಕೆಳಗೆ ನಮೂದಿಸಿದೆ.

| ಶಿಫಾರಸ್ಸು ಸಂಖ್ಯೆ | | ಇಲಾಖೆ |
|---|---|---|
| 1, 5, 7 ರಿಂದ 19, 29, 43, 44, 57 | : | ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ |
| 2, 4, 21(ಅ), 24, 25, 28, 30, 31, 40, 41, 42, 50 | : | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ |
| 2, 3, 6, 20, 50 ಸಾಮಾನ್ಯ ಶಿಫಾರಸ್ಸು (4) | : | ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮ |
| 20, 34, 35, 36 | : | ಸೇವಾ ನಿಯಮ-ಬಿ |
| 23 | : | ಕಂದಾಯ ಇಲಾಖೆ |
| 33 | : | ಸಿಆಸುಇ (ಸೇವೆಗಳು) |
| 45, 46 | : | ಲೋಕೋಪಯೋಗಿ ಮತ್ತು ಕಾಡಾ ಇಲಾಖೆ |
| 49 | : | ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ |
| 8, 58 | : | ಸೇವಾ ನಿಯಮ-ಎ |

ಮೇಲೆ ನಮೂದಿಸಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಂಡು ಈ ದಿಶೆಯಲ್ಲಿ ಹೊರಡಿಸಿದ ಆದೇಶ/ತೆಗೆದುಕೊಂಡ ಕ್ರಮವನ್ನು ಸಚಿವ ಸಂಪುಟದ ಅವಗಾಹನೆಗೆ ಸಲ್ಲಿಸಲು ಒಂದು ವರದಿಯನ್ನು ಪ್ರತಿ ತಿಂಗಳೂ ಸಹ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮ) ಇಲಾಖೆಗೆ ಸಲ್ಲಿಸುವಂತೆ ಕೋರಿದೆ.

-ಸಹಿ-
**(ಕೆ.ಕೆ. ನಾಡ್‌ಗೀರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)